ಕೂಡ ಆ ಕರ್ತವ್ಯವನ್ನು ಮಾಡುತ್ತಲೇ ಬಂದಿವೆ. ಈ ದಿನದ 'ಕನ್ನಡ ಪ್ರಭ' ದಿನಪತ್ರಿಕೆಯಲ್ಲಿ ಅದರ ಬಗ್ಗೆ ಪ್ರಮುಖವಾಗಿ ಪ್ರಸ್ತಾಪ ಮಾಡಿದ್ದಾರೆ. ಅಲ್ಲಿರುವ 813 ಕುಟುಂಬಗಳಲ್ಲಿ 650 ಕುಟುಂಬಗಳು ಕನ್ನಡಿಗರದು. 'ಬಯನಾ' ಪ್ರದೇಶದಲ್ಲಿ 'ಕೆಂಪು ದೀಪ'ದ ಪ್ರದೇಶವಿದ್ದು ಅಲ್ಲಿ ಮನೆಗಳನ್ನು ನೆಲಸಮ ಮಾಡಿದ್ದಾರೆ ಇತ್ಯಾದಿ ವಿವರಗಳನ್ನು ವರದಿಯಲ್ಲಿ ಪ್ರಸ್ತಾಪಿಸಲಾಗಿದೆ. ಈಗಾಗಲೇ ನಾನು ಸರ್ಕಾರದ ಅಧಿಕಾರಿಗಳ ಜೊತೆಗೆ ಈ ಬಗ್ಗೆ ಮಾತನಾಡಿದ್ದೇನೆ. ರಾಜ್ಯದ ಮುಖ್ಯ ಕಾರ್ಯದರ್ಶಿಯವರೂ ಕೂಡ ಅಲ್ಲಿನ ಮುಖ್ಯ ಕಾರ್ಯದರ್ಶಿಯವರನ್ನು ಸಂಪರ್ಕಿಸಿ, ಈ ರೀತಿಯ ಅನ್ಯಾಯ ಆಗದಂತೆ ನೋಡಿಕೊಳ್ಳಬೇಕೆಂದು ಸೂಚಿಸಿದ್ದೇನೆ. ಅಲ್ಲಿಗೆ ಕೆಲವು ಅಧಿಕಾರಿಗಳನ್ನೂ ಕೂಡ ಖುದ್ದಾಗಿ ಕಳುಹಿಸಿ, ಅದರ ವ್ಯವಸ್ಥೆಯನ್ನು ಮಾಡತಕ್ಕಂಥ ರೀತಿಯಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ. ಮಾನ್ಯ ವಾಟಾಳ್ ನಾಗರಾಜ್‌ರವರು ಏನೂ ಭಯ ಪಡಬೇಕಾಗಿಲ್ಲ. ಕನ್ನಡಿಗರ ಬಗ್ಗೆ ತಮ್ಮ ಏನೊಂದು ಭಾವನೆ ಇದೆಯೋ, ಅದರ ಬಗ್ಗೆ ನಮ್ಮದೂ ಕೂಡ ಅಷ್ಟೇ ಸಹಾನುಭೂತಿ ಇದೆ. ಅದರ ಬಗ್ಗೆ ಎಲ್ಲಾ ತರಹದ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆ. ಮಾನ್ಯ ಆರಗ ಜ್ಞಾನೇಂದ್ರರವರು ತಮ್ಮ ಮತ ಕ್ಷೇತ್ರದಲ್ಲಿ ದರೋಡೆಗಳಾಗುತ್ತಿದೆ ಎಂಬುದನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ನಾನು ಡಿ.ಜಿ. ಯವರಿಗೆ strict instruction ಕೊಟ್ಟು, ಎಲ್ಲಾ ಕಡೆಗೂ ದರೋಡೆ ಆಗುವುದನ್ನು ನಿಲ್ಲಿಸಬೇಕು ಮತ್ತು ಅದು ಆಗದಂತೆ ನೋಡಿಕೊಳ್ಳಬೇಕೆಂದು ಸೂಚಿಸುತ್ತೇನೆ. ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ Law and Order ಬಹಳ ಚೆನ್ನಾಗಿದೆ ಅನ್ನತಕ್ಕಂಥ ಅಭಿಪ್ರಾಯವನ್ನು ಮೂಡಿಸತಕ್ಕಂಥ ರೀತಿಯಲ್ಲಿ ಬಹಳ ಜಾಗ್ರತೆಯಿಂದ ಕ್ರಮ ತೆಗೆದುಕೊಳ್ಳಬೇಕೆಂದು ಸ್ಪಷ್ಟವಾದ ಆದೇಶ ಸರ್ಕಾರದ ಕಡೆಯಿಂದ ಸಂಬಂಧಪಟ್ಟವರಿಗೆ ಹೋಗುತ್ತದೆ.

ಊ) ವಿಷಯ : ವಿರಾಜಪೇಟೆ ತಾಲ್ಲೂಕಿನಿಂದ ಕೇರಳಕ್ಕೆ ಮರುಳು ಸಾಗಣೆಯಾಗುತ್ತಿರುವ ಬಗ್ಗೆ

ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ) : ಮಾನ್ಯ ಅಧ್ಯಕ್ಷರೇ, ಕರ್ನಾಟಕ–ಕೇರಳ ಗಡಿ ಪ್ರದೇಶದಲ್ಲಿ ವಿರಾಜಪೇಟೆ ತಾಲ್ಲೂಕು ಇರುವುದು ತಮಗೂ ಕೂಡ ಗೊತ್ತಿದೆ. ಇತ್ತೀಚಿನ ದಿವಸಗಳಲ್ಲಿ ವಿರಾಜಪೇಟೆ ತಾಲ್ಲೂಕಿನಲ್ಲಿ ಇರತಕ್ಕಂಥ ತೋಡುಗಳು ಮತ್ತು ಕಾಲುವೆ, ಹೊಳೆ ಬದಿ, ಇವುಗಳಲ್ಲಿನ ಮರಳನ್ನು ತೆಗೆದು ಸಾಗಣೆ ಮಾಡತಕ್ಕಂಥ ಒಂದು ಪ್ರವೃತ್ತಿ ಜಾಸ್ತಿಯಾಗುತ್ತಿದೆ. ಇದರಿಂದಾಗಿ ಅಲ್ಲಿನ ಸ್ಥಳೀಯರಿಗೆ ಮನೆ ಕಟ್ಟಲಿಕ್ಕೆ ಅಥವಾ ಮರಳನ್ನು ಇತರ ಯಾವ ಕೆಲಸಗಳಿಗೆ ಅವರು ಉಪಯೋಗಿಸಿಕೊಳ್ಳುತ್ತಿದ್ದರೋ ಅದಕ್ಕೆ ಮರಳಿನ ಕೊರತೆ ಉಂಟಾಗಿ ಅದನ್ನು ಬಳಸಿಕೊಳ್ಳುವ ಅವಕಾಶ ಸಿಕ್ಕಾಪಟ್ಟೆ ಕಡಿಮೆಯಾಗುತ್ತಿದೆ. ಈ ರೀತಿ ತೆಗೆದ ಮರಳನ್ನು ಕೇರಳ ರಾಜ್ಯಕ್ಕೆ ರಾಜಾರೋಷವಾಗಿ ಸಾಗಣೆ ಮಾಡುತ್ತಿದ್ದಾರೆ, ದಿನನಿತ್ಯ ನೂರಾರು ಲಾರಿಗಳು ವಿರಾಜಪೇಟೆ ತಾಲ್ಲೂಕಿನಿಂದ ಕೇರಳ ರಾಜ್ಯಕ್ಕೆ ಹೋಗುತ್ತಿವೆ. ಇದಕ್ಕೆ ತಡೆಯುವುದಕ್ಕೆ ಹೋದಂತಹ ಸಮಾಜದ ಕೆಲವು ಬಂಧುಗಳು ಅಹಿತಕರ ಘಟನೆಗೆ ಒಳಗಾಗಬೇಕಾದಂತಹ ಸಂದರ್ಭ ಬಂದಾಗ, ನಾನು ಶಾಂತಿಯುತವಾಗಿ ಈ ಬಗ್ಗೆ ಪ್ರತಿಭಟನೆ ಮಾಡಿದರೂ ಸಹ ಈ ಒಂದು ಸಾಗಾಣಿಕೆ ನಿಲ್ಲುತ್ತಿಲ್ಲ. ಮಾನ್ಯ ಅಧ್ಯಕ್ಷರ ಮೂಲಕ ನಾನು ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುವುದೇನೆಂದರೆ, ಈ ಒಂದು ದಂಧೆಯಿಂದಾಗಿ ಇತ್ತೀಚಿನ ದಿವಸಗಳಲ್ಲಿ ಪ್ರಾಮಾಣಿಕವಾಗಿರುವಂತಹ ಒಬ್ಬ ಗ್ರಾಮ ಪಂಚಾಯಿತಿ ಅಧ್ಯಕ್ಷ ಮತ್ತು ಬಿ.ಜೆ.ಪಿ. ಕಾರ್ಯಕರ್ತರಾಗಿದ್ದವರು ಗುಂಡೇಟಿಗೆ ಬಲಿಯಾದರು. ಅದೂ ಕೂಡ ಗಂಭೀರವಾದಂತಹ ವಿಚಾರವಾಗಿದೆ.

ಗ್ರಾಮ ಪಂಚಾಯಿತಿ ಅಧ್ಯಕ್ಷರು ಅವರ ಅವಧಿಯಲ್ಲಿ ಇದಕ್ಕೆ ನಿರ್ಬಂಧ ಹಾಕಬೇಕು ಹತೋಟಿಗೆ ತರಬೇಕು. ಈ ರೀತಿ ಮರಳು ಸಾಗಾಣಿಕೆ ಆಗುವುದರಿಂದ ಅಂತರ್ಜಲ ಕುಸಿಯುತ್ತಿದೆ ಎಂದು ಹೇಳಿದ್ದರಿಂದ ಗ್ರಾಮ ಪಂಚಾಯಿತಿ ಅಧ್ಯಕ್ಷರನ್ನೇ ಗುಂಡೇಟಿನಿಂದ ಹೊಡೆದು ಸಾಯಿಸಿದರು. ಅವರ ಮಗ ಒಬ್ಬ ಹಾಕಿ ಪಟು. ಅವರ ಕಾಲಿಗೆ ಗುಂಡೇಟು ಹೊಡೆದು ನಡೆದಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಇವತ್ತು ಆ ಕುಟುಂಬ ನಿರ್ಗತಿಕ ಕುಟುಂಬವಾಗಿದೆ. ಆ ಕುಟುಂಬದವರು ಬೆಳಿಗ್ಗೆ ನನಗೆ ಫೋನ್ ಮಾಡಿ ಹೇಳುತ್ತಿದ್ದಾರೆ, ನನ್ನ ಮಗನಿಗೆ ವಿದ್ಯಾಭ್ಯಾಸಕ್ಕೆ ಐದು ಸಾವಿರ ರೂಪಾಯಿಯಾದರೂ ಕಳುಹಿಸಿಕೊಡಿ; ಅಂತಹ ಕೆಟ್ಟ ಪರಿಸ್ಥಿತಿಯಲ್ಲಿ ನಾನು ಇದ್ದೇನೆಂದು ಹೇಳುತ್ತಿದ್ದಾರೆ. ಈ ಸಂದರ್ಭದಲ್ಲಿ ಸರ್ಕಾರದ ಗಮನ ಸೆಳೆಯುತ್ತಾ, ಯಾವುದೇ ಕಾರಣಕ್ಕೂ ನನ್ನ ತಾಲ್ಲೂಕಿನಲ್ಲಿ ಮರಳು ಸಾಕಾಣಿಕೆ ಏನು ನಡೆಯುತ್ತಿದೆ ಅದನ್ನು ಸಂಪೂರ್ಣವಾಗಿ ನಿಲ್ಲಿಸಬೇಕೆಂದು ಒತ್ತಾಯ ಮಾಡುತ್ತೇನೆ. ಎರಡನೆಯದಾಗಿ, ಗ್ರಾಮ ಪಂಚಾಯಿತಿ ಮಟ್ಟದಲ್ಲಿ, ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಹತ್ಯೆ ಆಗಿರತಕ್ಕಂತಹ ಕುಟುಂಬಕ್ಕೆ ಐದು ಲಕ್ಷ ರೂಪಾಯಿ ಹಣ ಆದರೂ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ಕೊಡಬೇಕು. ಆ ವ್ಯಕ್ತಿಯ ಮಗ ಏನು ಹಾಕಿ ಪಟು ಆಗಿದ್ದವನು ಇದ್ದಾನೆ, ಇವತ್ತು ಅವನು ಓಡಾಡುವುದಕ್ಕೆ ಆಗುತ್ತಿಲ್ಲ. ಆತನಿಗೆ ಕೂಡ ವಿದ್ಯಾಭ್ಯಾಸ ಮುಂದುವರೆಸಲಿಕ್ಕೆ ಅವಕಾಶ ಮಾಡಿಕೊಟ್ಟು ಯಾವುದಾದರೂ ಒಂದು ಉದ್ಯೋಗ ಕೊಡಲು ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಇಲ್ಲಿ ವಿರಾಜಪೇಟೆ ತಾಲ್ಲೂಕಿನಲ್ಲಿ ಬಹಳಷ್ಟು ಜನರು ಇಂತಹ ಮರಳು ಸಾಗಾಣಿಕೆಯಲ್ಲಿ ನಿರತರಾಗಿದ್ದಾರೆ. ಆದರಿಂದ ಸ್ಥಳೀಯರಿಗೆ ಮರಳು ಸಿಗುತ್ತಿಲ್ಲ ಎನ್ನುವ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಸಮಸ್ಯೆ ಇದಕ್ಕಿಂತ ವ್ಯಾಪಕವಾಗಿದೆ. ಮತ್ತು ಗಂಭೀರವಾಗಿದೆ. ಮರಳು ಸಾಗಾಣಿಕೆಯಿಂದ ಸ್ಥಳೀಯರಿಗೆ ಮರಳು ಸಿಗುವುದಿಲ್ಲ ಎಂಬುದು ಒಂದು ಭಾಗವಾದರೆ, ಮರಳು ಸಾಗಾಣಿಕೆಯಿಂದ ಅಂತರ್ಜಲ ಕಡಿಮೆ ಆಗುವುದು ಎರಡನೆಯದು. ನದಿಗಳ ಪಾತ್ರ ಏನಿದೆ ಅದರಿಂದ ಭೂಮಿ ಕುಸಿದು ಬೀಳುತ್ತಿರುತ್ತವೆ. ಅವುಗಳಿಂದ ಸ್ಥಳೀಯರಿಗೆ ತೊಂದರೆಯಾಗುವುದು ಮತ್ತು ಅಂತರ್ಜಲಕ್ಕೆ ತೊಂದರೆಯಾಗುವುದು ಇರುವುದರಿಂದ ಮರಳು ತೆಗೆಯಬೇಕಾದರೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಪರವಾನಗಿ ತೆಗೆದುಕೊಳ್ಳಬೇಕಾಗುತ್ತದೆ. ಆಯ್ಕೆ ಮಾಡಿರತಕ್ಕಂತಹ ವ್ಯಕ್ತಿಗಳು ಮಾತ್ರ ಪರವಾನಗಿ ಪಡೆದುಕೊಂಡು ಮರಳನ್ನು ತೆಗೆದುಕೊಂಡು ಹೋಗಬಹುದು ಎಂದು ಇದೆ. ಅವ್ಯದ್ದು ಹರಾಜಿನಲ್ಲಿ ತೆಗೆದುಕೊಳ್ಳಬೇಕಾದ ನಿಯಮ ಇದೆ. ಈ ನಿಯಮಾವಳಿಗಳನ್ನು ಪಾಲಿಸಿದ್ದಾರೆಯೇ ಇಲ್ಲವೋ? ಅಕಸ್ಮಾತ್ ಮರುಳು ಸಾಗಾಣಿಕೆ ಮಾಡತಕ್ಕಂತಹವರು ತಾವು ಈಗಾಗಲೇ ಪ್ರಸ್ತಪ ಮಾಡಿದ ಹಾಗೆ ದೊಡ್ಡವರು ಅಧಿಕಾರದಲ್ಲಿರುವವರು ಮಾಡುವುದಾಗಿದ್ದರೆ ಅವರ ಮೇಲೆ ಮತ್ತು ಅಕ್ರಮಣ ಮಾಡಿ ಮರಳು ಸಾಗಾಣಿಕೆ ಮಾಡುವವರ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ಬೇರೆ ಬೇರೆ ಇಲಾಖೆಗಳು ಇರುತ್ತವೆ. ಈ ದಿವಸವೇ ಅವುಗಳಿಗೆ ಕಳುಹಿಸಿ ಖಂಡಿತವಾಗಿ ತಮಗೆ ಸೂಕ್ತವಾದ ಉತ್ತರವನ್ನು ತರಿಸಿಕೊಡುತ್ತೇವೆ.

ಋ) ವಿಷಯ : ಸಕಲೇಶಪುರ ತಾಲ್ಲೂಕಿನಲ್ಲಿ ಭಾರಿ ಮಳೆಯಿಂದಾಗಿ ಜನಜೀವನ ಹಾಗು ದೈನಂದಿನ ಬದುಕಿಗೆ ಅಡ್ಡಿ ಉಂಟಾಗಿರುವುದರ ಬಗ್ಗೆ